**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 96/2020**

**ಚಾ.ಸಾಃ 1, ಫಿರ್ಯಾ.ಸಾಃ 1**

| | |
|---|---|
| ಸಾಕ್ಷಿದಾರನ ಹೆಸರು | ಇಶ್ರದ್ ಜಹಾ |
| ಗಂಡನ ಹೆಸರು | ತಾಲಿಬ್ ಆಲಿ ಶಿಖಾರಿ |
| ವಯಸ್ಸು | 49 ವರ್ಷಗಳು |
| ಉದ್ಯೋಗ | ಮನೆಕೆಲಸ |
| ವಾಸ್ತವ್ಯ | ನೂರಾನಿ ಮೊಹಲ್ಲಾ, ಚಂದಾವರ |

**ಸಾಕ್ಷಿಯನ್ನು ದಿನಾಂಕಃ 08-09-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನನಗೆ ಒಟ್ಟು 4 ಜನ ಮಕ್ಕಳು. ನಾಲ್ಕು ಜನ ಮಕ್ಕಳ ಪೈಕಿ ಇಬ್ಬರಿಗೆ ಮದುವೆ ಮಾಡಿದ್ದು ಉಳಿದ ಇಬ್ಬರು ಮಕ್ಕಳು ಮತ್ತು ನಾನು ಚಂದಾವರದ ನೂರಾನಿ ಮೊಹಲ್ಲಾದಲ್ಲಿರುವ ನಮ್ಮ ಮನೆಯಲ್ಲಿ ವಾಸವಾಗಿರುತ್ತೇವೆ. ನನ್ನ ಗಂಡ ಸೌದಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ದಿನಾಂಕ 27-09-2019 ರಂದು ನಾನು ಚಂದಾವರ ಗ್ರಾಮದಲ್ಲಿ ನಮ್ಮ ಮನೆಯಿಂದ ಸುಮಾರು ಅರ್ಧ ಕಿಲೋಮೀಟರ್ ದೂರದಲ್ಲಿರುವ ನನ್ನ ತಾಯಿ ಮನೆಗೆ ನಮ್ಮ ಮನೆಗೆ ಬೀಗ ಹಾಕಿ ಹೋಗಿದ್ದೆ. ದಿನಾಂಕ 01-10-2019 ರಂದು ಬೆಳಿಗ್ಗೆ 06-00 ರ ಸಮಯಕ್ಕೆ ನನ್ನ ಮಗನಾದ ಮಹ್ಮದ್ ನಜೀರನು ನಮ್ಮ ಮನೆಯ ಬಳಿ ಬಟ್ಟೆ ತರಲು ಹೋಗಿ ನೋಡಲಾಗಿ ಯಾರೋ ಕಳ್ಳರು ನಮ್ಮ ಮನೆಯ ಬೀಗವನ್ನು ಕತ್ತರಿಸಿ ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದರು. ಸದರಿ ವಿಚಾರವನ್ನು ನನ್ನ ಮಗ ಬಂದು ನನಗೆ ಹೇಳಿದ. ನಂತರ ನಾನು, ನನ್ನ ಮಗ ಮತ್ತು ಸಾಕ್ಷಿದಾರರಾದ ಅಬ್ದುಲ್ ಕರೀಮ್ ಮತ್ತು ಮಹ್ಮದ್ ಸಿಕಂದರ ಜೊತೆ ಮನೆಗೆ ಹೋಗಿ ನೋಡಲಾಗಿ ನಮ್ಮ ಮನೆಯ ಮುಂದಿನ ಬಾಗಿಲಿಗೆ ಹಾಕಿದ್ದ ಬೀಗವನ್ನು ಕತ್ತರಿಸಲಾಗಿತ್ತು. ನಾನು ಮನೆಯ ಒಳಗೆ ಹೋಗಿ ನೋಡಲಾಗಿ ರೂಮಿನಲ್ಲಿದ್ದ ಗಾಡ್ರೇಜ್ ಬೀರುವಿನ ಬೀಗವನ್ನು ತೆಗೆದು ಅದರ ಒಳಗೆ ಇಟ್ಟಿದ್ದ 15 ಗ್ರಾಂ ನ ಒಂದು ಚಿನ್ನದ ಬಳೆ, 9 ಗ್ರಾಂ ತೂಕದ ಒಂದು ಲಾಕೆಟ್, 8 ಗ್ರಾಂ ಒಟ್ಟು ತೂಕದ ಒಂದು ಜೊತೆ ಕಿವಿಯೋಲೆ ಮತ್ತು 8 ಗ್ರಾಂ ತೂಕದ ಒಂದು ಜೊತೆ ಕುಡುಕು ಮತ್ತು ರಿಂಗು ಹಾಗೂ ರೂ.48,000-00 ನಗದು ಕಳ್ಳತನ ಆಗಿತ್ತು. ನಂತರ ನಾನು ಠಾಣೆಗೆ ಹೋಗಿ ಪಿರ್ಯಾದು ನೀಡಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಅದನ್ನು ಗುರುತಿಸಿದ್ದರಿಂದ ಪಿರ್ಯಾದನ್ನು ನಿಪಿ-1 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಅದೇ ದಿನ ಬೆಳಿಗ್ಗೆ 11-00 ಅಥವಾ 12-00 ರ ಸಮಯದಲ್ಲಿ ಪಿಎಸ್.ಐ. ಮೇಡಂ ಸ್ಥಳಕ್ಕೆ ಬಂದಿದ್ದರು. ಆ ಸಮಯದಲ್ಲಿ ಚಾಸಾ-2 ಮತ್ತು 3 ಸ್ಥಳದಲ್ಲಿ ಹಾಜರಿದ್ದರು. ಸ್ಥಳವನ್ನು ಪೋಲಿಸರಿಗೆ

ನಾನೇ ತೋರಿಸಿರುತ್ತೇನೆ. ಪೋಲಿಸರು ಸ್ಥಳದಲ್ಲಿ ಪಂಚನಾಮೆ ಮಾಡಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಈ ಪ್ರಕರಣದ ಗುನ್ಹೆ ಜಾಗೆ ಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿನ ಒಂದು ಸಹಿಯನ್ನು ಸಾಕ್ಷಿ ತನ್ನದು ಎಂದು ತಿಳಿಸಿದ್ದರಿಂದ ಪಂಚನಾಮೆಯನ್ನು ನಿಪಿ-2 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ಛಾಯಾಚಿತ್ರ ತೆಗೆಸಿರುತ್ತಾರೆ. ಸಾಕ್ಷಿ ಛಾಯಾಚಿತ್ರವನ್ನು ಗುರುತಿಸಿದ್ದರಿಂದ ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ನಮ್ಮ ಮನೆಯಲ್ಲಿ ಕಳ್ಳತನವಾದ 2 ದಿನಗಳ ನಂತರ ನಾನು ಠಾಣೆಗೆ ಹೋಗಿದ್ದೆ. ಆ ಸಂದರ್ಭದಲ್ಲಿ ಠಾಣೆಯಲ್ಲಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಇದ್ದರು. ಆಗ ಪೋಲಿಸರು ನನಗೆ ಯಾವುದೇ ವಸ್ತುಗಳನ್ನು ತೋರಿಸಿರುವುದಿಲ್ಲ.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**<u>ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,</u>**

2 ನೇ ಬಾರಿ ನಾನು ಠಾಣೆಗೆ ಹೋದಾಗ ಠಾಣೆಯಲ್ಲಿ ಪೋಲಿಸರು ನನ್ನ ಮನೆಯಲ್ಲಿ ಕಳ್ಳತನವಾಗಿದ್ದ ವಸ್ತುಗಳ ಪೈಕಿ ಒಂದು ಜೊತೆ ಬಂಗಾರದ ಕಿವಿಯೋಲೆಯನ್ನು ತೋರಿಸಿದರು ಎಂದರೆ ಸರಿಯಲ್ಲ. ಸಾಕ್ಷಿಗೆ ಈ ಪ್ರಕರಣದಲ್ಲಿ ಹಾಜರು ಮಾಡಿರುವ 2 ಜೊತೆ ಕಿವಿಯೋಲೆಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳು ತನ್ನ ಆಭರಣಗಳಲ್ಲ ಮತ್ತು ಅವುಗಳನ್ನು ತನ್ನ ಮನೆಯಿಂದ ಕಳ್ಳತನ ಮಾಡಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಆಭರಣಗಳು ನಮ್ಮ ಮನೆಯಲ್ಲಿ ಕಳ್ಳತನವಾದ ಆಭರಣಗಳು ಎಂದರೆ ಸರಿಯಲ್ಲ. ಸದರಿ ಆಭರಣಗಳನ್ನು ಪೋಲಿಸರು ಠಾಣೆಯಲ್ಲಿ ನನಗೆ ತೋರಿಸಿದ್ದಾರೆ ಎಂದರೆ ಸರಿಯಲ್ಲ.

ದಿನಾಂಕ 04-08-2020 ರಂದು ಸಾಯಂಕಾಲ ನಾನು ಮನೆಯಲ್ಲಿದ್ದಾಗ ಪೋಲಿಸರು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನಮ್ಮ ಮನೆಗೆ ಕರೆತಂದು ಅವರು ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ವ್ಯಕ್ತಿಗಳು ಎಂದು ತಿಳಿಸಿದರು ಮತ್ತು ಆರೋಪಿಗಳು ನನ್ನ ಮನೆಯಲ್ಲಿ ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡು ಕಳ್ಳತನ ಮಾಡಿದ ರೀತಿಯನ್ನು ತೋರಿಸಿದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿ ನೀಡಿದ್ದಾರೆ ಎಂದು ಹೇಳುವ ಮರು ಹೇಳಿಕೆಯನ್ನು ಸಸಅರವರು ಸಾಕ್ಷಿಗೆ ಓದಿ ಹೇಳಿದ್ದು ಸಾಕ್ಷಿ ಅದನ್ನು ನಿರಾಕರಿಸಿರುತ್ತಾರೆ. ಆದ್ದರಿಂದ ಸದರಿ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ನಾನು ನಿಪಿ-4 ರ ಪ್ರಕಾರ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾ.ಸಾಃ 1, ಪ್ರಾ.ಸಾಃ 1

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ನಿಪಿ-1 ಪಿರ್ಯಾದನ್ನು ಪೋಲಿಸರು ಬರೆದಿರುತ್ತಾರೆ. ಅದರಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ನಾನು ಹೇಳಿದ್ದನ್ನು ಬರೆದಿರುತ್ತಾರೆ. ನನ್ನ ಮನೆಯಲ್ಲಿ ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ದಿನಾಂಕ 01-10-2020 ರಂದು ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ಜಪ್ತು ಮಾಡಿರುವುದಿಲ್ಲ. ಆದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**